ಮೂಲ ದಾವಾ ಸಂಖ್ಯೆ 48/2016

ಡಿ ಡಬ್ಲ್ಯೂ-1

**(ದಿನಾಂಕ 18.12.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ವಾದಿ ಪರ ಶ್ರೀ ಕೆ ಎಂ ಸಿ ವಕೀಲರಿಂದಃ-**

ದಾವಾ ಆಸ್ತಿ ನಾನು ನೋಡಿರುತ್ತೇನೆ. ಅದರ ಒಟ್ಟು ವಿಸ್ತೀರ್ಣ 51 ಎಕರೆ 89 ಸೆಂಟ್ಸ್ ಇರುತ್ತದೆ. ದಾವಾ ಆಸ್ತಿಗೆ ವಾದಿಯರೇ ಮಾಲೀಕರು ಎಂದರೆ ಸರಿ. ದಿನಾಂಕ 17.11.1959 ರಲ್ಲಿ ವಾದಿಗಳ ತಂದೆ ನರಸಿಂಹಭಟ್ಟ ಅಗ್ನಿಹೋತ್ರಿ ರವರ ಮಗ ನಾರಾಯಣ ಭಟ್ಟ ಅವರ ಕಡೆಯಿಂದ 100 ರೂ ಗಳಿಗೆ ಖರೀದಿ ಮಾಡಿದ್ದರು ಎಂದರೆ ಸರಿ. ದಾವಾ ಆಸ್ತಿ ನರಸಿಂಹಭಟ್ಟ ಅಗ್ನಿಹೋತ್ರಿ ರವರ ಮಗ ನಾರಾಯಣ ಭಟ್ಟ ಅವರ ಹಸೆರಿಗೆ ಪಹಣಿ ದಾಖಲೆ ಕೂಡ ಆಗಿದೆ ಎಂದರೆ ಸರಿ. ವಾದಿಯರ ತಂದೆ ಮತ್ತು ವಾದಿಯರು ದಾವಾ ಆಸ್ತಿ ಯನ್ನು ಅಳತೆ ಮಾಡಿ ಹದ್ದುಬಸ್ತು ಮಾಡಿಕೊಂಡಿ ಅಂತಾ ನಮ್ಮ ಇಲಾಖೆಗೆ 1959 ರಿಂದ ಇಲ್ಲಿಯವರೆಗೆ ಸಾಕಷ್ಟು ಅರ್ಜಿಗಳನ್ನು ಕೊಟ್ಟಿದ್ದರು ಎಂದರೆ ಸರಿ. ನಾವು ಕ್ರಮ ಕೈಗೊಂಡಿರುತ್ತೇವೆ. ಇತ್ತೀಚಿಗೆ ಕೂಡ ವಾದಿಯರು ನನಗೆ ಅರ್ಜಿ ಸಲ್ಲಿಸಿ ದಾವಾ ಆಸ್ತಿ ಅಳತೆ ಮಾಡಿ ಹದ್ದು ಬಸ್ತು ಮಾಡಿ ಪೋಡಿ ಮಾಡಿ ಕೊಡಿ ಅಂತಾ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆದರೂ ಇಲ್ಲಿಯವರೆಗೆ ನಾವು ದಾವಾ ಆಸ್ತಿ ಅಳತೆ ಮಾಡಿ ಹದ್ದು ಬಸ್ತು ಮಾಡಿ ಪೋಡಿ ಮಾಡಿಕೊಟ್ಟಿರುವುದಿಲ್ಲಾ ಎಂದರೆ ಸರಿಯಲ್ಲ. ಇತ್ತೀಚಿಗೆ ಗಣಕೀಕೃತ ಆಗಿರುವ ಕಾರಣ ವಿವರಗಳನ್ನು ಗಣಕಯಂತ್ರದಲ್ಲಿ ನಮೂದು ಮಾಡಿರುತ್ತೇವೆ. ವಾದಿಯರ ಹೆಸರಿಗೆ ಪಹಣಿ ಪತ್ರಿಕೆ ಪ್ರತ್ಯೇಕ ಆಗಿಲ್ಲಾ ಎಂದರೆ 7 ಎಕರೆ ಆಸ್ತಿಗೆ ವಾದಿಯರ ಹೆಸರು ಪಹಣಿ ಪತ್ರಿಕೆಯಲ್ಲಿ ಜಂಟಿ ಆಗಿ ನಮೂದು ಆಗಿರುತ್ತದೆ. ಉಳಿದಂತೆ ಗುಡ್ಡಾ ಪರಂಪೋಕ್ ಅಂತಾ ನಮೂದು ಇರುತ್ತದೆ. ಸಾಕ್ಷಿ ಸರ್ಕಾರದ ಸುತ್ತೋಲೆ ಪ್ರಕಾರ ಸರ್ಕಾರದ ಜಮೀನನ್ನು ಪೋಡಿ ಮಾಡಬೇಕಾದಾಗ ಅದನ್ನು 1 ರಿಂದ 5 ತಂತ್ರಾಂಶದಲ್ಲಿ ನಮೂದು ಮಾಡಬೇಕು ನಂತರ ಪೋಡಿ ಮಾಡಿ ಕೊಡಬೇಕು ಅಂತಾ ಹೇಳುತ್ತಾರೆ. ಸದರಿ ಕಾರ್ಯ

ಪ್ರಗತಿಯಲ್ಲಿ ಇದೆ ಅಂತಾ ಹೇಳುತ್ತಾರೆ. ಪೋಡಿ ಕೆಲಸ ಸಂಪೂರ್ಣ ಆದರೆ ಪ್ರತ್ಯೇಕ ಪಹಣಿಯನ್ನು ನೀಡಬೇಕು ಎಂದರೆ ಸರಿ. ಪ್ರತಿವಾದಿ 7 ರಿಂದ 20 ರವರಿಗೆ ಅನಧಿಕೃತವಾಗಿ ವಾದಿಯರ ಸ್ವಾಧಿನಕ್ಕೂ ಕೂಡ ಧಕ್ಕೆ ಆಗುವ ರೀತಿಯಲ್ಲಿ ಸ್ಥಳ ಪರಿಶೀಲನೆ ಮಾಡದೇ ಲೈಸೆನ್ಸ್ ನೀಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ 7 ರಿಂದ 20 ರವರಿಗೆ ಗಣಿಗಾರಿಕಾ ಲೈಸೆನ್ಸ್ ನೀಡಿದ್ದು ಯಾವ ಯಾವ ಪ್ರತಿವಾದಿಯರಿಗೆ ಎಷ್ಟು ಎಷ್ಟು ವಿಸ್ತೀರ್ಣಕ್ಕೆ ಲೈಸೆನ್ಸ್ ಕೊಟ್ಟಿದ್ದೇವೆ ಎಂದರೆ ಲೈಸೆನ್ಸನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯರು ನೀಡಿರುತ್ತಾರೆ. 4ನೇ ಪ್ರತಿವಾದಿ ಲೈಸೆನ್ಸ್ ನೀಡುವ ಮುನ್ನ ನಮ್ಮಿಂದ ಮಾಹಿತಿ ಪಡೆಯತ್ತಾರೆ ಎಂದರೆ ಸರಿ. 4ನೇ ಪ್ರತಿವಾದಿ ನಮ್ಮಿಂದ ಸರ್ವೆ ನಕಾಶೆ, ಸ್ಥಳ ತನಿಖಾವರದಿ ಪಡೆದುಕೊಂಡಿರುತ್ತಾರೆ. ವಾದಿಯರ ಜಮೀನನ್ನು ಸೇರಿಸಿ ನಾವು ಸರ್ವೆ ನಕಾಶೆ ಮತ್ತು ಸ್ಥಳ ತನಿಖಾ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಕಲ್ಲು ಗಣಿಗಾರಿಕೆ ಮತ್ತು ಸ್ಥಳ ವೀಕ್ಷಣೆ ಮಾಡುವ ಅಧಿಕಾರ ಈಗ ಕೇವಲ 4ನೇ ಪ್ರತಿವಾದಿಯರಿಗೆ ಇರುತ್ತದೆ. 7 ರಿಂದ 20 ಕಲ್ಲು ರವವರಿಗೆ ನೀಡಿರುವ ಲೈಸೆನ್ಸ್ ಅವಧಿ 2 ವರ್ಷ ಇರುತ್ತದೆ. ಅದನ್ನು ರಿನಿವಲ್ ಮಾಡಿಸಿಕೊಳ್ಳುತ್ತಾರೆ. ರಿನಿವಲ್ ಮಾಡಿಸುವಾಗ ನಮ್ಮ ಇಲಾಖೆಗೆ ಪುನಃ ಸಂಪರ್ಕ ಮಾಡುವುದಿಲ್ಲ. ಸರ್ವೆ ಇಲಾಖೆಯಿಂದಲೇ ಸಿಬ್ಬಂದಿ ಬರುತ್ತಾರೆ. ತಾಲೂಕು ಮಟ್ಟದಲ್ಲಿ ಎಲ್ಲಾ ಸರ್ವೆಯರ್ ಗಳಿಗೆ ನಾನೇ ಮೇಲಾಧಿಕಾರಿ ಎಂದರೆ ಸರಿಯಲ್ಲ. ದಾವಾ ಜಮೀನಿಗೆ ಕುರಿತಂತೆ ಪ್ರತಿವಾದಿಗಳು ನಮ್ಮ ಇಲಾಖೆಗೆ ಲಿಖಿತ ಅರ್ಜಿಯನ್ನು ನೀಡಿ ನಾವು ನಿಗದಿ ಪಡಿಸಿದ ಶುಲ್ಕವನ್ನು ಪಾವತಿ ಮಾಡಿರುತ್ತಾರೆ ಎಂದರೆ ಅರ್ಜಿ ಮಾತ್ರ ಕೊಟ್ಟಿರುತ್ತಾರೆ ಶುಲ್ಕ ಕೊಟ್ಟಿರುವುದಿಲ್ಲ. 80 ರೂ ನಿಗದಿತ ಶುಲ್ಕವನ್ನು ದಿನಾಂಕ ರಂದು ಪ್ರತಿವಾದಿಯರು ಪಾವತಿಸಿರುತ್ತಾರೆ ಎಂದರೆ ಸರಿ. ನಿ ಪಿ 6 ರ ಪ್ರಕಾರ ಪ್ರತಿವಾದಿ ನಂತರ 1 ರವರ ಅಳತೆ

ಮಾಡಿಕೊಡುವಂತೆ ಒಂದು ಅರ್ಜಿಯನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ವಾದಿಯರು ನಿ ಪಿ 7, 8 ಮತ್ತು 9 ರ ಪ್ರಕಾರ ಆನ್ ಲೈನ್ ಮುಖಾಂತರ ಹಣವನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿ. ನಾನು ರಾಜಕೀಯ ಪ್ರಭಾವಕ್ಕೆ ಒಳಗಾಗಿ ವಾದಿಗಳ ಜಮೀನನ್ನು ಅಳತೆ ಮಾಡದೇ ಪ್ರತಿವಾದಿಯರಿಗೆ ಅನುಕೂಲ ಮಾಡಲು ಸುಳ್ಳು ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾಖಲಾತಿಗಳ ಪ್ರಕಾರ ವಾದಿಯರು ನಿಗದಿತ ಶುಲ್ಕ ಪಾವತಿ ಮಾಡಿದ್ದರೂ ಸಹ ನಾನು ನನ್ನ ಕೆಲಸ ಮಾಡಲು ವಿಫಲನಾಗಿರುತ್ತೇನೆ ಎಂದರೆ ಸರಿಯಲ್ಲ. ವಾದಿಗಳ ಜಮೀನನ್ನು ಅಳತೆ ಮಾಡಿಕೊಡಬೇಕು ಎಂದರೆ ಸರಿ. 1 ರಿಂದ 5 ತಂತ್ರಾಶ ಕೇವಲ ಸರ್ಕಾರಿ ಭೂಮಿಗೆ ಅನ್ವಯ ಆಗುತ್ತದೆ ಎಂದರೆ ಸರಿ. ವಾದಿಯರ ಜಮೀನು 7 ಎಕರೆ ಖಾಸಗಿ ಜಮೀನು ಆಗಿರುವ ಕಾರಣ ಸದರಿ ತಂತ್ರಾಶ ಪೋಡಿ ಮಾಡಲು ಅಡ್ಡ ಬರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರು 7 ಎಕರೆ ಜಮೀನಿನ ಸ್ವಾಧೀನವನ್ನು ಈಗಲೂ ಹೊಂದಿರುತ್ತಾರೆ ಎಂದರೆ ಸರಿ. ನಿ ಡಿ 1 ರಲ್ಲಿ ಸದರಿ ವಿಚಾರ ಸತ್ಯವಾಗಿ ನಮೂದು ಆಗಿದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.